ಕರ್ನಾಟಕ ಸರ್ಕಾರ

(14) (5)

ಸಂಖ್ಯೆ: ಆರ್‌ಡಿ 4 ಎಲ್‌ಜಿಪಿ 98

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹು ಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 15-1-1998.

## ಸುತ್ತೋಲೆ

ವಿಷಯ: ಗುತ್ತಿಗೆ ಆಧಾರದ ಮೇಲೆ ನೀಡಿರುವ ಕಾಫಿ ಗೋಡಂಬಿ ಮತ್ತು ಇತರೆ ಸಾಗುವಳಿಗಾಗಿ ನೀಡಿದ ಜಮೀನುಗಳನ್ನು ಖಾಯಂಗೊಳಿಸುವ ಮತ್ತು ಬೆಲೆ ನಿಗಧಿಪಡಿಸುವ ಬಗ್ಗೆ.

ಉಲ್ಲೇಖ:-1) ಸರ್ಕಾರಿ ಪತ್ರ ಸಂಖ್ಯೆ: ಆರ್‌ಡಿ 30 ಎಲ್‌ಜಿಪಿ 94 ದಿನಾಂಕ 9-6-94.
2) ಇದೇ ಸಮಸಂಖ್ಯೆಯ ಸುತ್ತೋಲೆ ದಿನಾಂಕ 20-11-95
3) ವಿಭಾಗಾಧಿಕಾರಿಗಳು, ಮೈಸೂರು ವಿಭಾಗ, ಮೈಸೂರು ಇವರ ಅರೆ ಸರ್ಕಾರಿ ಪತ್ರ ಸಂಖ್ಯೆ: ಎಲ್‌ಎನ್‌ಡಿ(1)48:95-96 ದಿ: 28-10-95.
4) ಜಿಲ್ಲಾಧಿಕಾರಿಗಳು, ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು ಇವರ ಪತ್ರ ಸಂಖ್ಯೆ: ಎಂಜಿ4:ಎಲ್‌ಎನ್‌ಆರ್:ಸಿಆರ್:26:95-96 ದಿ: 24-7-95.
5) ಸರ್ಕಾರಿ ಆದೇಶ ಸಂಖ್ಯೆ: ಆರ್‌ಡಿ 69 ಎಲ್‌ಜಿಎಂ 72 ದಿ: 30-7-73.

---

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಕಾಫಿ ಮತ್ತು ಗೋಡಂಬಿ ಸಾಗುವಳಿಗಾಗಿ ಗುತ್ತಿಗೆ ನೀಡಲಾದ ಸರ್ಕಾರಿ ಜಮೀನುಗಳನ್ನು ಖಾಯಂಗೊಳಿಸುವುದರಲ್ಲಿ ಪ್ರಸ್ತುತ ಮಾರುಕಟ್ಟೆ ಬೆಲೆ ವಿಧಿಸಿ ಮಂಜೂರು ಮಾಡಬೇಕೆಂದು ಉಲ್ಲೇಖ(1)ರಲ್ಲಿನ ಪತ್ರದಲ್ಲಿ ಸರ್ಕಾರವು ವಿಭಾಗಾಧಿಕಾರಿಗಳಿಗೆ ಮತ್ತು ಜಿಲ್ಲಾಧಿಕಾರಿಗಳಿಗೆ ಸೂಚನೆಗಳನ್ನು ನೀಡಿರುತ್ತದೆ. ವಿಭಾಗಾಧಿಕಾರಿಗಳು, ಮೈಸೂರು ವಿಭಾಗ, ಮೈಸೂರು ಮತ್ತು ಜಿಲ್ಲಾಧಿಕಾರಿಗಳು, ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು, ಉಲ್ಲೇಖ 3 ಮತ್ತು 4 ರಲ್ಲಿನ ಪತ್ರಗಳಲ್ಲಿ ಗೇಣಿಗೆ ನೀಡಿರುವ ಜಮೀನನ್ನು ಖಾಯಂಗೊಳಿಸಲು ಪ್ರಸ್ತುತ ಮಾರುಕಟ್ಟೆ ಬೆಲೆ ವಿಧಿಸುವ ಬಗ್ಗೆ ಸರ್ಕಾರದ ಸ್ಪಷ್ಟೀಕರಣವನ್ನು ಕೋರಿರುತ್ತಾರೆ. ಸದರಿಯವರ ಪ್ರಸ್ತಾವನೆಗಳನ್ನು ಸರ್ಕಾರವು ಪರಿಶೀಲಿಸಲಾಯಿತು. ಕಾಫಿ ಮತ್ತು ಗೋಡಂಬಿ ಸಾಗುವಳಿಗಾಗಿ ಗೇಣಿ ಮೇಲೆ ನೀಡಲಾದ ಜಮೀನುಗಳನ್ನು ಈಗಿನ ಬದಲಾವಣೆಯಾದ ಕಾರಣಗಳಿಂದ ಸಾಕಷ್ಟು ಬೆಲೆ ಬಾಳುತ್ತವೆ. ಅಲ್ಲದೆ ಗೇಣಿದಾರರು ಗುತ್ತಿಗೆ ನೀಡಲಾದ ಜಮೀನುಗಳನ್ನು ಕಾಫಿ ಮತ್ತು ಗೋಡಂಬಿ ಬೆಳೆಗಳಿಗಾಗಿ ಅಭಿವೃದ್ಧಿ ಪಡಿಸಿದ್ದರೂ ಸಹ ಇವರಿಂದ ಬರುವ ಸಾಕಷ್ಟು ಆದಾಯವನ್ನು ಗುತ್ತಿಗೆದಾರರು ಪ್ರತಿ ವರ್ಷ ಕಾಫಿ ಮತ್ತು ಗೋಡಂಬಿ ಬೆಳೆಗಳಿಂದ ಲಾಭದಾಯಕವಾಗಿರುತ್ತದೆ.

ಸರ್ಕಾರವು ಸದರಿ ವಿಷಯದ ಬಗ್ಗೆ ಮತ್ತೊಮ್ಮೆ ಪರಿಶೀಲಿಸಲಾಗಿ ಕಾಫಿ ಮತ್ತು ಗೋಡಂಬಿ ಸಾಗುವಳಿಗಾಗಿ ನೀಡಲಾದ ಗುತ್ತಿಗೆ ಜಮೀನುಗಳನ್ನು ಖಾಯಂಗೊಳಿಸುವಲ್ಲಿ ಮಾರುಕಟ್ಟೆ ಬೆಲೆಯನ್ನು ವಿಧಿಸುವುದು ಸಕಾರಣವಾಗಿರುತ್ತದೆ ಎಂದು ತೀರ್ಮಾನಿಸಿರುತ್ತದೆ.

ಆದ್ದರಿಂದ ಕಾಫಿ ಮತ್ತು ಗೋಡಂಬಿ ಸಾಗುವಳಿಗಾಗಿ ಗುತ್ತಿಗೆ ನೀಡಲಾದ ಜಮೀನುಗಳಿಗೆ ಚಾಲ್ತಿಯಲ್ಲಿರುವ ಮಾರುಕಟ್ಟೆ ದರವನ್ನು ವಿಧಿಸಿ ಖಾಯಂಗೊಳಿಸಲು ನಿರ್ದೇಶಿಸಿದೆ. ಸದರಿ ಸೂಚನೆ ರೀತ್ಯಾ ಬಾಕಿ ಇರುವ ಎಲ್ಲಾ ಪ್ರಕರಣಗಳ ಬಗ್ಗೆ ಮುಂದಿನ ಕ್ರಮ ಕೈಗೊಳ್ಳಲು ಸೂಚಿಸಿದೆ.

ಇದೇ ಸಮಸಂಖ್ಯೆ ದಿನಾಂಕ 20-11-95ರಲ್ಲಿ ಹೊರಡಿಸಲಾದ ಸುತ್ತೋಲೆಯನ್ನು ಸರ್ಕಾರವು ಹಿಂತೆಗೆದುಕೊಂಡಿದೆ. ತತ್ಪರಿಣಾಮವಾಗಿ ಸರ್ಕಾರಿ ಆದೇಶ ಸಂಖ್ಯೆ: ಆರ್‌ಡಿ 69 ಎಲ್‌ಜಿಎಂ 72 ದಿನಾಂಕ 30-7-73 ರದ್ದುಪಡಿಸಲಾಗಿದೆ.

(ಟಿ.ಜಿ. ನಾಗರಾಜು)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಭೂ ಮಂ-1)

1) ಎಲ್ಲಾ ವಿಭಾಗಾಧಿಕಾರಿಗಳಿಗೆ
2) ಎಲ್ಲಾ ಜಿಲ್ಲಾಧಿಕಾರಿಗಳಿಗೆ.